# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:** | **1234** |
| ಮಾನ್ಯ ಸದಸ್ಯರ ಹೆಸರು | ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ: | 17-12-2025<br>(ಕಂದಾಯ ಇಲಾಖೆಯಿಂದ ವರ್ಗಾವಣೆ ಆಗಿರುತ್ತದೆ) |
| ಉತ್ತರಿಸುವವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಕಂದಾಯ ಇಲಾಖೆಯು ಹಿಂದುಳಿದ ವರ್ಗಗಳ ಅಡಿಯಲ್ಲಿ ಬರುವ ಸರ್ಕಾರಿ ಹಾಗೂ ಅನುದಾನಿತ ನೌಕರರಿಗೆ ಆದಾಯ ಮತ್ತು ಜಾತಿ ಪ್ರಮಾಣ ಪತ್ರ ವಿತರಣೆ ಮಾಡುವಾಗ ಅನುಸರಿಸುತ್ತಿರುವ ನಿಯಮಗಳು ಮತ್ತು ಮಾನದಂಡಗಳು ಯಾವುದು; | ಭಾರತ ಸಂವಿಧಾನ ಅನುಚ್ಛೇದ 15(4)ರನ್ವಯ ಶೈಕ್ಷಣಿಕ ಮತ್ತು 16(4)ರನ್ವಯ ಉದ್ಯೋಗದ ಮೀಸಲಾತಿಗಾಗಿ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಜಾತಿ ಪ್ರಮಾಣ ಪತ್ರವನ್ನು ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990 ಹಾಗೂ ನಿಯಮಗಳು, 1992ರಡಿ ನೀಡಲಾಗುತ್ತಿದೆ.<br><br>ಪ್ರಸ್ತುತ, ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ: 30-03-2002ರಂತೆ ಪ್ರವರ್ಗವಾರು ಈ ಕೆಳಕಂಡಂತೆ ಮೀಸಲಾತಿಯನ್ನು ನಿಗಧಿ ಪಡಿಸಲಾಗಿದೆ:-<br><br>ಪ್ರವರ್ಗ-I — 4%<br>ಪ್ರವರ್ಗ-IIಎ — 15%<br>ಪ್ರವರ್ಗ-IIಬಿ — 4%<br>ಪ್ರವರ್ಗ-IIIಎ — 4%<br>ಪ್ರವರ್ಗ-IIIಬಿ — 5%<br><br>ಮೀಸಲಾತಿಯನ್ನು ನೀಡುವಾಗ ಕೆನೆಪದರ ನೀತಿಯನ್ನು ಅಳವಡಿಸಿಕೊಳ್ಳಲಾಗಿದೆ. ಅದರಂತೆ, ಅಭ್ಯರ್ಥಿಯ ಮತ್ತು ಅವರ ತಂದೆ / ತಾಯಿ / ಪೋಷಕರ ವಾರ್ಷಿಕ ಆದಾಯ ಮಿತಿಯನ್ನು ರೂ.8.00 ಲಕ್ಷಗಳಿಗೆ ನಿಗಧಿಗೊಳಿಸಲಾಗಿರುತ್ತದೆ. ಅಭ್ಯರ್ಥಿಯ ಮತ್ತು ಅವರ ತಂದೆ / ತಾಯಿ / ಪೋಷಕರು ಸರ್ಕಾರದ ಒಂದನೇ ಅಥವಾ ಎರಡನೇ ದರ್ಜೆಯ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದರೆ ಮೀಸಲಾತಿಯನ್ನು ಪಡೆಯಲು ಅರ್ಹರಿರುವುದಿಲ್ಲ.<br><br>ಅಭ್ಯರ್ಥಿಯ ಮತ್ತು ಅವರ ತಂದೆ / ತಾಯಿ / ಪೋಷಕರು ಸೇರಿದಂತೆ ಕರ್ನಾಟಕ ಭೂ-ಸುಧಾರಣೆ ಕಾಯ್ದೆ, 1961ರಡಿಯಲ್ಲಿ ನಿಗಧಿಪಡಿಸಿರುವ 10 ಯೂನಿಟ್ ಕೃಷಿ ಭೂಮಿಗಿಂತ ಹೆಚ್ಚು ಕೃಷಿ ಭೂಮಿ ಹೊಂದಿರುವವರು ಆದರೆ, ಪ್ಲಾಂಟೇಶನ್ ಬೆಳೆಗಳನ್ನು ಬೆಳೆಯುವ ಭೂಮಿಗೆ ಸಂಬಂಧಿಸಿದಂತೆ 20 ಎಕರೆಗಿಂತ ಹೆಚ್ಚು ಭೂಮಿ ಹೊಂದಿರುವವರು ಮೀಸಲಾತಿ ಪಡೆಯಲು ಅರ್ಹರಿರುವುದಿಲ್ಲ (ಆದೇಶದ ಪ್ರತಿಯನ್ನು ಅನುಬಂಧದಲ್ಲಿ ಒದಗಿಸಿದೆ). |

| | | |
|---|---|---|
| ಆ) | ರಾಜ್ಯ ಕಂದಾಯ ಇಲಾಖೆಯು ಆದಾಯ ಪ್ರಮಾಣ ಪತ್ರ ನೀಡುವಲ್ಲಿ ಕೇಂದ್ರ ಸರ್ಕಾರದ 1993ರ ಅಧಿಸೂಚನೆಯಂತೆ ಕೃಷಿ ಮತ್ತು ವೇತನ ಆದಾಯವನ್ನು ಹೊರಗಿಟ್ಟು ಕೆನೆಪದರ ನೀತಿ ಅನುಸರಿಸಬೇಕು ಎಂಬ ನಿಯಮಗಳು ಮತ್ತು ಅಧಿಸೂಚನೆಯಗಳನ್ನು ಪಾಲಿಸುತ್ತಿದೆಯೇ; | ಭಾರತ ಸಂವಿಧಾನದ ಅನುಚ್ಛೇದ 342-ಎ (3) ರಲ್ಲಿ ಈ ಕೆಳಕಂಡಂತೆ ಅಧಿಸೂಚಿಸಲಾಗಿದೆ:-<br><br>…(3) Notwithstanding any contained in clauses (1) and (2), every State or Union territory may, by law, prepare and maintain, for its own purposes, a list of socially and educationally backward classes, entries in which may be different from the Central List.]<br><br>ಅದರಂತೆ, ರಾಜ್ಯ ಸರ್ಕಾರವು ತನ್ನದೇ ಆದ ಮೀಸಲಾತಿ / ಕೆನೆಪದರ ನೀತಿಯನ್ನು ಅಳವಡಿಸಿಕೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ 1993ರ ಅಧಿಸೂಚನೆಯು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಶೈಕ್ಷಣಿಕ ಮತ್ತು ಉದ್ಯೋಗದ ಮೀಸಲಾತಿಗೆ ಅನ್ವಯ ವಾಗುವುದಿಲ್ಲ. |
| ಇ) | ಇತ್ತೀಚೆಗೆ ರಾಜ್ಯ ಕಂದಾಯ ಇಲಾಖೆಯು ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವಾಗ ಕೇಂದ್ರ ಸರ್ಕಾರ ರೂಪಿಸಿರುವ ನಿಯಮ ಹಾಗೂ ಅಧಿಸೂಚನೆಗಳನ್ನು ಹೊರತುಪಡಿಸಿ ಭಿನ್ನ ಕೆನೆಪದರ ನೀತಿ ಅನ್ವಯಿಸುತ್ತಿರುವುದರಿಂದ ವೇತನದಾರರ ಮಕ್ಕಳು ಅಖಿಲ ಭಾರತ ಹಾಗೂ ರಾಜ್ಯ ಕೋಟದಡಿ ವೈದ್ಯಕೀಯ ಇಂಜಿನಿಯರಿಂಗ್ ಹಾಗೂ ಇತರೆ ವೃತ್ತಿಪರ ಪ್ರವೇಶ ಪಡೆಯುವಾಗ ಅವಕಾಶ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು? | ಯಾವ ಸಮುದಾಯ / ಜಾತಿಯು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವ ಶಿಕ್ಷಣ ಮತ್ತು ಉದ್ಯೋಗದ ಮೀಸಲಾತಿಗಾಗಿ ಗುರುತಿಸಲ್ಪಟ್ಟಿರುವ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿದ್ದಲ್ಲಿ, ಅಖಿಲ ಭಾರತ ಕೋಟಾದಡಿ ವೈದ್ಯಕೀಯ ಮತ್ತು ಇತರೆ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕೆ ಮೀಸಲಾತಿಯನ್ನು ಪಡೆಯಬಹುದಾಗಿದೆ.<br><br>ಮುಂದುವರೆದು, ರಾಜ್ಯ ಸರ್ಕಾರ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಹೊರಡಿಸಲಾಗಿರುವ ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ: 30-03-2002ರಂತೆ ಅರ್ಹ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ರಾಜ್ಯದಲ್ಲಿ ಮೀಸಲಾತಿಯನ್ನು ಪಡೆಯ ಬಹುದಾಗಿರುತ್ತದೆ.<br><br>ಆದ್ದರಿಂದ, ವೇತನದಾರರ ಮಕ್ಕಳು ಅಖಿಲ ಭಾರತ ಹಾಗೂ ರಾಜ್ಯ ಕೋಟದಡಿ ವೈದ್ಯಕೀಯ ಇಂಜಿನಿಯರಿಂಗ್ ಹಾಗೂ ಇತರೆ ವೃತ್ತಿಪರ ಪ್ರವೇಶ ಪಡೆಯುವಾಗ ಅವಕಾಶ ವಂಚಿತರಾಗುತ್ತಿರುವುದಿಲ್ಲ. |
| ಈ) | ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ವೈದ್ಯಕೀಯ, ಐಐಟಿ, ಇಂಜಿನಿಯರಿಂಗ್ ಹಾಗೂ ಇನ್ನಿತರ ಕೋರ್ಸುಗಳ ಪ್ರವೇಶಕ್ಕಾಗಿ ಪ್ರತಿ ವರ್ಷ ನೀಟ್ ಹಾಗೂ ಜೆಇಇ ಪರೀಕ್ಷೆಗಳನ್ನು ನಡೆಸುತ್ತಿದು, ರಾಷ್ಟ್ರಮಟ್ಟದ ಪ್ರವೇಶ ಪರೀಕ್ಷೆ ಬರೆದು ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಪೋಷಕರ ವೇತನ ಆದಾಯ 8 ಲಕ್ಷಕ್ಕಿಂತ ಹೆಚ್ಚಿದ್ದರೂ ಅಂತಹ ಮಕ್ಕಳಿಗೆ ಅಖಿಲ ಭಾರತ ಕೋಟಾದಡಿ ಪ್ರವೇಶ ನೀಡಲಾಗುತ್ತಿರುವುದರಿಂದ ಅದೇ ವಿದ್ಯಾರ್ಥಿಗಳು ರಾಜ್ಯದ ಕೋಟಾದಡಿ ಪ್ರವೇಶ ಪಡೆಯುವಾಗ ಕೆನೆಪದರ ನೀತಿ ಅನ್ವಯಿಸಲಾಗುತ್ತಿದ್ದು ಅವಕಾಶ ವಂಚಿತರಾಗುವುದಕ್ಕೆ ಸರ್ಕಾರವೇ ನೇರ ಹೊಣೆಯಾಗುತ್ತಿರುವ ಬಗ್ಗೆ, ಕೈಗೊಂಡ ಕ್ರಮಗಳೇನು; | ಭಾರತ ಸರ್ಕಾರದ ಅಧಿಕೃತ ಜ್ಞಾಪನ ದಿನಾಂಕ: 13-09-2017ರನ್ವಯ ಪೋಷಕರ ಆದಾಯ ಮಿತಿಯನ್ನು ರೂ.8.00 ಲಕ್ಷಗಳಿಗೆ ನಿಗಧಿ ಪಡಿಸಲಾಗಿರುತ್ತದೆ. ಅದರಂತೆ, ರಾಜ್ಯ ಸರ್ಕಾರವು ಸಹ ದಿನಾಂಕ: 14-09-2018ರ ಆದೇಶದಲ್ಲಿ ಅಭ್ಯರ್ಥಿಯ / ಪೋಷಕರ ವಾರ್ಷಿಕ ಒಟ್ಟು ಆದಾಯ ಮಿತಿಯನ್ನು ರೂ.8.00 ಲಕ್ಷಗಳಿಗೆ ನಿಗಧಿಪಡಿಸಲಾಗಿದೆ. ಇದರಿಂದಾಗಿ ಅಭ್ಯರ್ಥಿಯ / ಪೋಷಕರ ಆದಾಯವು ರೂ.8.00 ಲಕ್ಷಗಳು ಮೀರಿದ್ದಲ್ಲಿ ಅಂತಹ ಅಭ್ಯರ್ಥಿಗಳು ಶೈಕ್ಷಣಿಕ ಮತ್ತು ಉದ್ಯೋಗದಲ್ಲಿ ಮೀಸಲಾತಿ ಪಡೆಯಲು ಅವಕಾಶ ಇರುವುದಿಲ್ಲ. |

| | | |
|---|---|---|
| ಉ) | ಕಳೆದ ಅಧಿವೇಶನದಿಂದೀಚೆಗೂ ಈ ಸಮಸ್ಯೆಯನ್ನು ಬಗೆಹರಿಸಲು ಯಾವುದೇ ಕ್ರಮ ಕೈಗೊಳ್ಳದೇ ಇರಲು ಕಾರಣವೇನು? | ಮೇಲಿನ ಉತ್ತರದಿಂದ ಪ್ರಶ್ನೆ ಉದ್ಭವಿಸುವುದಿಲ್ಲ. |

ಸಂಖ್ಯೆ: ಹಿಂವಕ 451 ಬಿಸಿಎ 2025

(ಶಿವರಾಜ.ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

## ಸಮಾಜ ಕಲ್ಯಾಣ ಸಚಿವಾಲಯ

ವಿಷಯ: ಹೊಸ ಕೆನೆಪದರ ಮತ್ತು ಭಾರತದ ಸಂವಿಧಾನದ ಅನುಚ್ಛೇದ 15(4) ರಂತೆ ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶ ಮತ್ತು ಅನುಚ್ಛೇದ 16(4)ರ ಮೇರೆಗೆ ನೇಮಕಾತಿಗಳಲ್ಲಿ ಮೀಸಲಾತಿಗಳು - ಆದೇಶ ಕುರಿತು.

ಓದಲಾಗಿದೆ: (1) ಸರ್ಕಾರಿ ಆದೇಶ ಸಂಖ್ಯೆ : ಸಕಇ 150 ಬಿಸಿಎ 94, ದಿ: 17-9-1994.

(2) ಸರ್ಕಾರಿ ಆದೇಶ ಸಂಖ್ಯೆ : ಸಕಇ 251 ಬಿಸಿಎ 94, ದಿ: 31-1-1995.

(3) ಸರ್ಕಾರಿ ಆದೇಶ ಸಂಖ್ಯೆ : ಸಕಇ 394 ಬಿಸಿಎ 95, ದಿ: 14-2-1996.

(4) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯ ಕಾರ್ಯದರ್ಶಿ ಇವರ ಪತ್ರ ಸಂಖ್ಯೆ: ಕೆಎಸ್‌ಸಿಬಿಸಿ:ಎಂಎಸ್: ರಿಪೋರ್ಟ್ 2000-01, ದಿನಾಂಕ: 14-12-2000.

ಪ್ರಸ್ತಾವನೆ:

ಕ್ರಮ ಸಂಖ್ಯೆ : (1) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ: 17-9-94 ರಲ್ಲಿ ಸರ್ಕಾರವು, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳಿಗಾಗಿ 1994-95ನೇ ಸಾಲಿನಲ್ಲಿ, ವೃತ್ತಿಪರ ಶಿಕ್ಷಣಕ್ಕಾಗಿ ಪ್ರವೇಶ ಪಡೆಯಲು ಈ ಕೆಳಗಿನಂತೆ ಮೀಸಲಾತಿ ನಿಗದಿಪಡಿಸಲಾಗಿತ್ತು.

| | |
|---|---|
| ಪ್ರವರ್ಗ - I | 4% |
| ಪ್ರವರ್ಗ - II(ಎ) | 15% |
| ಪ್ರವರ್ಗ - II(ಬಿ) | 4% |
| ಪ್ರವರ್ಗ - III(ಎ) | 4% |
| ಪ್ರವರ್ಗ - III(ಬಿ) | 5% |
| ಪರಿಶಿಷ್ಟ ಜಾತಿಗಳು | 15% |
| ಪರಿಶಿಷ್ಟ ಪಂಗಡಗಳು | 3% |

2. ಮೇಲಿನ ಆದೇಶದ ಅಡಿಯಲ್ಲಿ ಕೆನೆಪದರ ನೀತಿಯನ್ನು ಜಾರಿಗೆ ತರುತ್ತಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಹಾಗೂ ಇತರೆ ಹಿಂದುಳಿದ ವರ್ಗಗಳ ಪ್ರವರ್ಗ-1ನ್ನು ಹೊರತುಪಡಿಸಿ ಯಾವುದೇ ವ್ಯಕ್ತಿ ಕೆನೆಪದರ ನೀತಿಯನ್ವಯ ನಿಗದಿಪಡಿಸಿದ ನಿಬಂಧನೆಗಳ ವ್ಯಾಪ್ತಿಗೆ ಒಳಪಟ್ಟು ಮೀಸಲಾತಿಗಾಗಿ ಅರ್ಹತೆ ಹೊಂದುತ್ತಾನೆ ಎಂದು ಪ್ರತಿಪಾದಿಸಲಾಗಿದೆ.

3. ಕ್ರಮಸಂಖ್ಯೆ (2) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ 31-1-95 ರಲ್ಲಿ ವೃತ್ತಿಪರ ಶಿಕ್ಷಣಕ್ಕಾಗಿ ಕ್ರಮಸಂಖ್ಯೆ (1) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ: 17-9-94 ರಲ್ಲಿ ನಿಗದಿಪಡಿಸಿದ ಮೀಸಲಾತಿ ಹಾಗೂ ಕೆನೆಪದರ ನೀತಿಯನ್ನು ಭಾರತ ಸಂವಿಧಾನದ ಅನುಚ್ಛೇದ 16(4) ರಂತೆ ನೇಮಕಾತಿಗಳಿಗೂ ವಿಸ್ತರಿಸಲಾಯಿತು.

4. ಕ್ರಮಸಂಖ್ಯೆ (3) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ: 14-2-96 ರಲ್ಲಿ ದಿನಾಂಕ: 1-1-1995 ರಂದು ವೃತ್ತಿಪರ ಶಿಕ್ಷಣಕ್ಕಾಗಿ ಅಸ್ತಿತ್ವದಲ್ಲಿದ್ದ ಮೀಸಲಾತಿ ಹಾಗೂ ಕೆನೆಪದರ ನೀತಿಯನ್ನು ದಿನಾಂಕ: 1-1-1994 ರಿಂದ ಪೂರ್ವಾನ್ವಯವಾಗಿ ನೇಮಕಾತಿಗಳಿಗೂ ಅನ್ವಯವಾಗುವಂತೆ ಜಾರಿಗೆ ತರಲಾಯಿತು.

5. ಯಾವುದೇ ಸಂದರ್ಭದಲ್ಲಿ ಮೀಸಲಾತಿಯು ಶೇ. 50 ಕ್ಕೆ ಮೀರಬಾರದೆಂದು ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 438:94 ರಲ್ಲಿ ಮಧ್ಯಂತರ ಆದೇಶ ನೀಡಿದೆ. ಇಂತಹುದೇ ರಿಟ್ ಅರ್ಜಿಗಳು ಸಂಖ್ಯೆ: 471:94 ಹಾಗೂ 694:94 ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಇತ್ಯರ್ಥ ಬಾಕಿ ಇವೆ. ಆದುದರಿಂದ ಸರ್ಕಾರಿ ಆದೇಶ ಸಂಖ್ಯೆ: ಸಕಇ 61 ಬಿಸಿಎ 95 ದಿನಾಂಕ: 28-12-95, ದಿನಾಂಕ: 17-9-94 ಹಾಗೂ 13-1-95ರ ಸರ್ಕಾರಿ ಆದೇಶಗಳಲ್ಲಿ ನಿಗದಿಪಡಿಸಿದ ಶೇ. 50 ಮೀಸಲಾತಿಯ ಚಲಾವಣೆಯನ್ನು ರಿಟ್ ಅರ್ಜಿ ಸಂಖ್ಯೆ: 438:94, 471:94 ಮತ್ತು 694:94 ರಲ್ಲಿ ಸರ್ವೋಚ್ಚ ನ್ಯಾಯಾಲಯವು ಅಂತಿಮ ತೀರ್ಮಾನ ಕೈಗೊಳ್ಳುವವರೆಗೆ ವಿಸ್ತರಿಸಲಾಗಿದೆ.

6. ಈಗ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಕ್ರಮ ಸಂಖ್ಯೆ (4) ರಲ್ಲಿ ಓದಲಾದ ತನ್ನ ಪತ್ರ ದಿನಾಂಕ: 14-12-2000 ರಲ್ಲಿ ವಿಶೇಷ ವರದಿ ಹಾಗೂ 71 ಸಲಹೆಗಳನ್ನು ಸರ್ಕಾರಕ್ಕೆ ಸಲ್ಲಿಸಿದೆ. ಸಂಪೂರ್ಣ ವರದಿಯನ್ನು ಪರಿಶೀಲಿಸುವುದನ್ನು ಬಾಕಿ ಇಟ್ಟು ಸರ್ಕಾರವು ವಿಶೇಷ ವರದಿಯಲ್ಲಿನ ಕೆನೆಪದರ ನೀತಿ ಹಾಗೂ ಸಲಹೆಗಳಿಗೆ ಸಂಬಂಧಿಸಿದಂತೆ ಜಾತಿಗಳನ್ನು ಸೇರಿಸುವುದು,

ತೆಗೆದುಹಾಕುವುದು ಹಾಗೂ ಗುಣಾತ್ಮಕ ದೋಷಗಳನ್ನು ಸರಿಪಡಿಸುವುದು ಇತ್ಯಾದಿ 71 ಸಲಹೆಗಳನ್ನು ಸವಿವರವಾಗಿ ಪರಿಶೀಲಿಸಿದೆ. ಅಂತೆಯೇ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ಬೆಂಗಳೂರು, ದಿನಾಂಕ: 30ನೇ ಮಾರ್ಚ್ 2002**

ಪೀಠಿಕೆಯಲ್ಲಿಯ ಪ್ರಸ್ತಾವನೆಯನ್ನು ಸವಿವರವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

1) ಮೇಲೆ ಕ್ರಮ ಸಂಖ್ಯೆ (1) ಮತ್ತು (2) ರಲ್ಲಿ ಅನುಕ್ರಮವಾಗಿ ಓದಲಾದ ಸರ್ಕಾರಿ ಆದೇಶಗಳು ದಿನಾಂಕ: 17-9-94 ಹಾಗೂ 31-1-95 ರಲ್ಲಿ ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶ ಹಾಗೂ ನೇಮಕಾತಿಗಳಿಗಾಗಿ ನಮೂದಿಸಲಾದ ಮೀಸಲಾತಿಯ ಪ್ರಮಾಣವನ್ನು ಮುಂದುವರೆಸಲಾಗಿದೆ.

2) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸುಗಳನ್ನು ಅಳವಡಿಸಿ ಈ ಆದೇಶದ ಅನುಬಂಧ - I ರಲ್ಲಿ ಲಗತ್ತಿಸಲಾದ ಹಿಂದುಳಿದ ವರ್ಗಗಳ ಪರಿಷ್ಕೃತ ಪಟ್ಟಿಯನ್ನು ಈ ತಕ್ಷಣವೇ ಜಾರಿಗೆ ತರಲಾಗಿದೆ.

3) ಈ ಆದೇಶದ ಅನುಬಂಧ - II ರಲ್ಲಿ ಲಗತ್ತಿಸಿದ ಹೊಸ ಸಮಗ್ರ ಕೆನೆಪದರ ನೀತಿಯನ್ನು ಈ ತಕ್ಷಣ ಜಾರಿಗೆ ತರಲಾಗಿದೆ. ಈ ಕೆನೆಪದರ ನೀತಿಯು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಮತ್ತು ಹಿಂದುಳಿದ ವರ್ಗಗಳ ಪ್ರವರ್ಗ - I ಕ್ಕೆ ಅನ್ವಯಿಸುವುದಿಲ್ಲ. ಪ್ರವರ್ಗ - II(ಎ), II(ಬಿ), III(ಎ) ಮತ್ತು III(ಬಿ) ಅಡಿಯಲ್ಲಿ ಬರುವ ಅಭ್ಯರ್ಥಿಗಳು ಅನುಬಂಧ - II ರಲ್ಲಿನ ಹೊಸ ಸಮಗ್ರ ಕೆನೆಪದರ ನೀತಿಯಲ್ಲಿ ವಿಧಿಸಿದ ಅನುಬಂಧನೆಗಳಿಗೆ ಅನುಗುಣವಾಗಿ ಮೀಸಲಾತಿಗೆ ಅರ್ಹರಾಗುವರು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಿ.ಎಂ. ಆಗಾ
ಸರ್ಕಾರದ ಉಪ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ

**ಸರ್ಕಾರಿ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ಬೆಂಗಳೂರು, ದಿನಾಂಕ: 30ನೇ ಮಾರ್ಚ್ 2002**

**ಅನುಬಂಧ - I**

**ಪ್ರವರ್ಗ - I**

| ಕ್ರಮ ಸಂಖ್ಯೆ | ಜಾತಿಯ ಹೆಸರು | ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|---|---|
| 1 | ಅಗಮುಡಿ | (g) | ದವರಿ |
| 2 (a) | ಅಂಬಲಕಾರನ್ | (h) | ಗೋಸಾಯಿ |
| (b) | ಅಂಬಲಕರ್ಮ | (i) | ಗುಸಾಯ್ |
| (c) | ಮುತ್ತರಾಸಿ | (j) | ಹೆಳವ |
| (d) | ಮುತ್ತರಾಚ | (k) | ಹೆಳೂವ |
| 3 | ಬಗ್ಗರು | (l) | ಹೊಲೆವ |
| 4 | ಬವಂದಿ | (m) | ನಂದಿವಾಲ |
| 5 (a) | ಬಾವಾಜಿ | (n) | ಪಿಚಗುಂಟ |
| (b) | ಅತಿತ್ | (o) | ಪಿಚ್‌ಗುಂಟಲ |
| (c) | ಬೈರಾಗಿ | (p) | ಪಿಚಗುಂಟಲ |
| (d) | ಬವಾನಿ | (q) | ಬಾವ |
| (e) | ಬೈರಾಗಿ | (r) | ಬ್ಯಾರಗಿ |
| (f) | ಡಾಂಗೋಸಾಯಿ | | |

I-4 *

| ಕ್ರಮ ಸಂಖ್ಯೆ | ಜಾತಿಯ ಹೆಸರು | ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|---|---|
| 6 (a) | ಬೆಸ್ತ | (aj) | ತೊರೆಯ |
| (b) | ಅಂಬಿಗ / ಅಂಬಿ | (ak) | ವಾಗಿ |
| (c) | ಬಾರ್ಕಿ / ಬಾರಿಕ | 7 (a) | ಭಾಮ್ಟ |
| (d) | ಬೆಸ್ತರ್ | (b) | ಭೋಂಪ್ಟ |
| (e) | ಭೋಯಿ | (c) | ಪರದೇಶಿ - ಭಾಂಪ್ಟ |
| (f) | ರಾಜಬೊಯಿ | (d) | ಟಕರಿ |
| (g) | ಬುಂಡೆ - ಬೆಷ್ತರ್ | (e) | ಭೋಂಪ್ತ |
| (h) | ದಾಲ್ಜಿ | (f) | ಉಚ್ಚಲಿಯನ್ |
| (i) | ದಾವತ್ | 8 | ಭಾಟ್ರಾಜು |
| (j) | ಗಬಿಟ್ | 9 (a) | ಬೋಗಡ್ |
| (k) | ಗಲಾಡಕೊಂಕಣಿ | (b) | ಬೇಗಾಡಿ |
| (l) | ಗಂಗೆಮಕ್ಕಳು | (c) | ಬಗಲಿ |
| (m) | ಗಂಗಾಕುಲ | (d) | ಬೋಗಾಡಿ |
| (n) | ಗಂಗಾಮತ | 10 (a) | ಬುಡಬುಡುಕಿ |
| (o) | ಗಂಗ್ಗಾಮತಸ್ಥ | (b) | ಬುಡೂಡ್ಕಿ |
| (p) | ಗಂಗಾಪುತ್ರ | (c) | ಚೇಟ್ರಿ |
| (q) | ಗೌರಿಮತ | (d) | ದೇವರಿ |
| (r) | ಬುಂಡೆ-ಬೆಸ್ತ / ಗುಂಡೆ ಬೆಸ್ತ | (e) | ಗರಡಿ |
| (s) | ಹರಕಂತ್ರ | (f) | ಗಡ್ಡಿಡ್ಕಿ |
| (t) | ಜಲಗಾರ | (g) | ಜೋಷಿ |
| (u) | ಕಬ್ಬೇರ / ಕಬ್ಬೇರ್ | (h) | ಕಿಚೆಗಾರ |
| (v) | ಕಬ್ಬಲಿಗ | (i) | ಕಿಲ್ಲಿಕ್ಯಾತ |
| (w) | ಕಬ್ಬಲಿ | (j) | ಮೋದಿಗ |
| (x) | ಕಹರ್ | (k) | ಪನ್ಸ |
| (y) | ಖಾರ್ವಿ / ಕೊಂಕಣ ಖಾರ್ವಿ | (l) | ಪನಸ |
| (z) | ಕೋಳಿ | (m) | ಪಿಂಗಳೆ |
| (aa) | ಕೋಳಿಮಹದೇವ್ | (n) | ಸಾದಜೋಷಿ |
| (ab) | ಮಡ್ಡರ್ | (o) | ಬುಡ್‌ಬುಡಕಾಲ |
| (ac) | ಮೀನಗಾರ್ | 11 | ಚುಂಚೆರ್ |
| (ad) | ಮೊಗವೀರ | 12 (a) | ಧಾಸರಿ |
| (ae) | ಮೊಗೇರ್ | (b) | ಧಾಸರು |
| (af) | ಮುಕ್ಕವಾನ್ | (c) | ಚಕ್ರವಾದ್ಯ - ದಾಸ |
| (ag) | ಪರಿವಾರ | (d) | ದಂಗ್ - ದಾಸರ್ |
| (ah) | ಸಿವಿಯರ್ | (e) | ದೊಂಬ - ದಾಸರು |
| (ai) | ಸುಣಗಾರ | | |

| ಕ್ರಮ ಸಂಖ್ಯೆ | ಜಾತಿಯ ಹೆಸರು | ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|---|---|
| 13 (a) | ದೇವದಾಸಿ | 19 (a) | ಹಾವಾಡಿಗ |
| (b) | ಬಸವಿ | (b) | ಹಾವ್ ಗಾರ್ |
| (c) | ಭಾವಿನ್ | (c) | ಹೌಗಾರ್ |
| (d) | ಭೋಗಮ್ | 20 (a) | ಜಂಗಾಲ |
| (e) | ಗಣಿಕ | (b) | ತೆಲುಗು ಜಂಗಮ |
| (f) | ಕಲಾವಂತ್ | (c) | ಪಾಕನಾತಿ ಜಂಗಮ |
| (g) | ನಟ್ | 21 (a) | ಜೋಗಿ |
| (h) | ನಟುವ | (b) | ಬ್ರಹ್ಮ ಕಪಾಲಿ |
| (i) | ಪತ್ರಮೇಳ | (c) | ಜೋಗಾರ್ |
| 14 (a) | ಘಿಸಾಡೆ | (d) | ಜೋಗ್ತಿನ್ |
| (b) | ಘಿಸಾಡಿ | (e) | ಕಪಾಲಿ |
| 15 (a) | ಗೋಣಿಗ ಮನೆ | (f) | ರಾವಳ್ |
| (b) | 24 ಮನೆ ತೆಲುಗು ಶೆಟ್ಟಿ | (g) | ರವಳಿಯ |
| (c) | ಗೋಣಿಚೆಟ್ಟಿ | (h) | ಸಂಜೋಗಿ |
| (d) | ಸಾದುಸೆಟ್ಟಿ | (i) | ಸನ್ಯಾಸಿ |
| (e) | ಸಲಪರು | (j) | ಜೋಗರ್ |
| 16 (a) | ಗುರವ್ | (k) | ನಾಥಪಂಥಿ |
| (b) | ತಾಂಬಲ್ಲ | 22 (a) | ಖಂಜೆರ್ ಭಾಟ್ |
| (c) | ತಾಂಬ್ಲಿ | (b) | ಕಂಜರ್ |
| 17 | ಗುರ್ಖಾ | (c) | ಖಂಜರ್ ಭಾಟ್ |
| 18 (a) | ಹಾಲುವಕ್ಕಿ ಒಕ್ಕಲ್ | 23 (a) | ಕಾಶಿಕಪಾಡಿ |
| (b) | ಹಾಲುವಕ್ಕಿ ವಕ್ಕಲ್ | (b) | ಕಾಶಿಕಪ್ಡಿ |
| (c) | ಅಟ್ಟೆ ಒಕ್ಕಲು | (c) | ತಿರುಮಲಿ |
| (d) | ಗಾಮ್ ಗವಡ | 24 (a) | ಕಟಬರ್ |
| (e) | ಗಾಮ್ ಒಕ್ಕಲ್ | (b) | ಕಟಬು |
| (f) | ಗ್ರಾಮ ಒಕ್ಕಲು | 25 (a) | ಕಾಟಿಕ್ |
| (g) | ಹಾಲಕ್ಕಿ ಒಕ್ಕಲು | (b) | ಅರೆಯ್ |
| (h) | ಕರೆ ಒಕ್ಕಲು | (c) | ಅರೆ ಕಸಾಯ್ |
| (i) | ಕುಂಚ ವಕ್ಕಲು | (d) | ಅರಿಕಾಟಿಕೀಲು |
| (j) | ಶಿಲ್ವಕ್ಕಲ್ | (e) | ಕಲಾಲ್ ಖಾಟಿಕ್ |
| (k) | ವಕ್ಕಲ್ | (f) | ಕಸಾಬ್ |
| (l) | ಗವಡ | (g) | ಕಸಾಯ್ |
| (m) | ಗಾಮ್ ಗವಡ | (h) | ಮರಟ್ಟಿ |
| (n) | ಗ್ರಾಮ ವಕ್ಕಲು | (i) | ಸೂರ್ಯವಂಶ ಕ್ಷತ್ರಿಯ |
| | | 26 | ಕೊಡಗು ರಾವಾಳ್ |

| ಕ್ರಮ ಸಂಖ್ಯೆ | ಜಾತಿಯ ಹೆಸರು | ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|---|---|
| 27 (a) | ಕೊಲಾರ | 42 | ಪಣಿಕ |
| (b) | ಕಲಾಯಿರಿ | 43 (a) | ರಾಯ ರಾವತ್ |
| (c) | ಕೊಲೇರ | (b) | ರಾವತ್ |
| 28 (a) | ಕೊಲ್ಲ | 44 | ರೈನುದಾಸ್ |
| (b) | ಕೊಲ್ಲಾಲ | 45 | ಸಾನ್ವಿಯ |
| 29 (a) | ಕೊಠಾರಿ | 46 | ಸೆತಾರ್‌ಕರ್ |
| (b) | ಕೊಟ್ಟಾರಿ | 47 | ಸಿದ್ಧಿ |
| (c) | ಕೋಠಾರಿ | 48 (a) | ಸಿಕ್ಕಲಿಗಾರ |
| 30 | ಕುಡುಬಿ | (b) | ಶಿಕಾಲಗಾರ್ |
| 31 | ಕುಂಬ್ರಿ ಮರಾಠಿ (ಉತ್ತರ ಕನ್ನಡ ಜಿಲ್ಲೆ) | (c) | ಶಿಕ್ಕಲಿಗರ್ |
| 32 (a) | ಕುಣಬಿ | 49 (a) | ಸೋಮವಂಶ ಆರ್ಯ ಕ್ಷತ್ರಿಯ |
| (b) | ಕುಳವಾಡಿ | (b) | ಚಿತಾರ |
| (c) | ಕಣಬಿ | (c) | ಚಿತ್ರಗಾರ |
| 33 (a) | ಕುರ್ಮ | (d) | ಧಿಗ್ವಾನ್ |
| (b) | ಕುರ್ಮಿ | (e) | ಜೀರಗಾರ |
| 34 (a) | ಲಾಡರು / ಲಾಡರ / ಲಾಡರ್ | (f) | ನಾಜಬಂಧ್ |
| (b) | ಲಾಡ್ / ಕ್ಷತ್ರಿಯಲಾಡ್ / ಸುಗಂಧಿ ಲಾಡ್ | (g) | ನಾಲಬಂಧ್ |
| (c) | ಏಲೆಗಾರ್ | (h) | ಕಾಂಬಟ್ |
| 35 | ಮಲಿಯ | 50 | ತಕನ್‌ಕರ |
| 36 (a) | ಮೇದರ | 51 (a) | ತೇವರ್ |
| (b) | ಬಟ್ಗರ್ | (b) | ಕಲರಿ |
| (c) | ಬನ್ಸೋಡ್ | (c) | ಕಲ್ಲರ್ |
| (d) | ಗೌರಿಗ | (d) | ಮರವರ್ |
| (e) | ಗೌರ್ವ್ ರಿಗ | 52 (a) | ತಿಲಾರಿ |
| (f) | ಗೌರಿ | (b) | ತಿರಳಿ |
| (g) | ಗೌರಿ ಮರಾಠ | 53 (a) | ಉಪ್ಪಾರ |
| (h) | ಗೌರಿಗ | (b) | ಬೆಲ್ದರ್ |
| (i) | ಮೇದರಿ | (c) | ಚುನಾರ್ |
| (j) | ಬುರುಡ್ | (d) | ಗಾವಾಡಿ |
| 37 | ಮುದರ್ | (e) | ಗೌಂಡ |
| 38 | ನಾಯಿರಿ /ನ್ಯಾರಿ | (f) | ಕಲ್ಲು ಕುಟಿಗ ಉಪ್ಪಾರ |
| 39 | ಒಟರಿ | (g) | ಲೋಣಾರಿ |
| 40 | ಪಾಮ್ಲೋರ್ | (h) | ಮೇಲು ಸಕ್ಕರೆಯವರು |
| 41 (a) | ಪಾಂಗ್ಯುಯಲ್ | (i) | ಮೇಲು ಸಕ್ಕರೆ |
| (b) | ಪಾಂಗ್ಯುಸಲ್ | (j) | ನಾಮದ ಉಪ್ಪಾರ |

| ಕ್ರಮ ಸಂಖ್ಯೆ | ಜಾತಿಯ ಹೆಸರು | ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|---|---|
| (k) | ಪಡಿತ್ / ಪಡ್ತಿ | 64 (a) | ಭಾರ್ಡಿ |
| (l) | ಪಡಿತಿ | (b) | ಭಾರ್ಗಿ |
| (m) | ಪಾಡಿ | 65 (a) | ಚಾರ |
| (n) | ಸಗರ | (b) | ಚಾರ್ |
| (o) | ಸುಣ್ಣಗಾರ | (c) | ಚ್ಯಾರ್ |
| (p) | ಸುಣ್ಣ ಉಪ್ಪಾರ | 66 (a) | ಚಪ್ಪರ್ ಬಂದ್ (ಮುಸ್ಲಿಂ) |
| (q) | ಉಪ್ಪಳಿಗ | (b) | ಚಪ್ಪರ್ ಬಂದ |
| (r) | ಉಪ್ಪಳಿಗಶೆಟ್ಟಿ | 67 | ಚಿತ್ರಕಥಿ ಜೋಷಿ |
| (s) | ಉಪ್ಪಳಿಯನ್ | 68 | ದರ್ವೇಸು |
| (t) | ಉಪ್ಪೇರ | 69 | ಧೋಲಿ |
| (u) | ಯಕಲಾರ | 70 (a) | ದುಗ್ಗಾಳಮುರ್ಗಿ |
| (v) | ಎಕ್ಕಲಿ | (b) | ಬುರ್‌ಬುರ್‌ಚ |
| 54 | ವಾಯ್ದು | 71 (a) | ಮೋದಿಕಾರ |
| 55 | ವಾಸುದೇವ್ | (b) | ಮೋದಿಕರ್ |
| 56 (a) | ವೀರ್ | 72 (a) | ಗೋಂದಲಿ |
| (b) | ವೀರಮುಷ್ಠಿ | (b) | ಘೋಂದಲಿ |
| (c) | ವಿರ್ | (c) | ಗೂಂದಲಿಗ |
| 57 | ಐರಾಲು | (d) | ಗೋಂಧಲಿ |
| 58 (a) | ಎರ್‌ಕಲ | (e) | ಗೊಂಧಳ್ಳಿ |
| (b) | ಇರಕಲ | 73 | ಜಾಗ್ರಿ |
| (c) | ಕೈಕಾಡಿ | 74 (a) | ಜವೇರಿ |
| (d) | ಕೊರಗಾರ್ | (b) | ಜವರಿ |
| (e) | ಕೊರ್‌ಮಶೆಟ್ಟಿ | 75 | ಜೋಹರಿ |
| (f) | ಕುಂಚಿ | 76 (a) | ಕಾಮಟ್ಟಿ |
| (g) | ಕೊರ್ವಾರಿ | (b) | ಕಮಟ್ |
| (h) | ಎರುಕುಲ | 77 (a) | ಕಂಜರಿ |
| 59 (a) | ಬೈಲ್‌ಪತರ್ | (b) | ಕಂಜಿರ್ |
| (b) | ಬೈಲಪತರ್ | 78 (a) | ಕಲ್ಯಾರಿ, ಕೇಲ್ಯಾರಿ |
| (c) | ಬಿಲಪತರ್ | (b) | ಚೇಲ್ಯಾರಿ |
| 60 (a) | ಬಜನಿಯ | 79 (a) | ಕೋಲ್ಹಟಿ |
| (b) | ಬಜೆನಿಯ | (b) | ಕೋಲ್ಹಟಿಗ |
| 61 | ಬಾಲಸಂತೋಷಿ | 80 | ಮಸಣಿಯ ಯೋಗಿ |
| 62 | ಬಾಜಿಗಾರ್ | 81 | ಫುಲ್ ಮಾಲಿ |
| 63 | ಡೇರಿಯ | 82 | ಸಾರಂತ |
| | | 83 (a) | ಸರೋಡ್ಡಿ |
| | | (b) | ಸರೋಡ |

| ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|
| 84 | ವಾಡಿ |
| 85 | ಬೇಡರು |
| 86 (a) | ಗೊಲ್ಲ |
| (b) | ಯಾದವ್ |
| (c) | ಅಸ್ಥಾನಗೊಲ್ಲ |
| (d) | ಯಾದವ |
| (e) | ಅಡವಿಗೊಲ್ಲ |
| (f) | ಗೋಪಾಲ |
| (g) | ಗೋಪಾಲಿ |
| (h) | ಗೌಳಿ |
| (i) | ಗಾವ್‌ಳಿ |
| (j) | ಗಾವಳಿ |
| (k) | ಗಾವ್ಲಿ |
| (l) | ಅನುಬರು |
| (m) | ಆಟನಬರು |
| (n) | ಹಣಬರ್ |
| (o) | ಕಾವಡಿ |
| (p) | ಕೊಲಯನ್ |
| (q) | ಕೊನಾರ್ |
| (r) | ಕೊನ್ನೂರ್ |
| (s) | ಕೃಷ್ಣ ಗೌಳಿ |
| (t) | ಕೃಷ್ಣ ಗೊಲ್ಲ |
| (u) | ಮಣಿಯಾನಿ |
| (v) | ಉರಳಿ |
| (w) | ತೆಲುಗು ಗೌಡ (ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆ) |
| 87 (a) | ಬಂಜರಿ |
| (b) | ಬ್ರಿಂಜಾರಿ |
| (c) | ವಂಜಾರ |
| (d) | ವಂಜಾರಿ |
| (e) | ಲುಂಬೈಡ್ |

| ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|
| (f) | ಗೋರೆ ಅಥವಾ ಗೋರಿಯ |
| 88 (a) | ಬೆಂಡರ್ |
| (b) | ಬೆರಾಡ್ |
| (c) | ಬೋಯ |
| (d) | ನಾಯಕಮಕ್ಕಳು |
| (e) | ನಾಯಕ್‌ವಾಡಿ |
| (f) | ಪಾಳೇಗಾರ |
| (g) | ರಮೋಶಿ |
| (h) | ತಳವಾರ / ತಳವಾರ್ ಬೋಯ |
| (i) | ವಾಲ್ಮೀಕಿ ಮಕ್ಕಳು |
| (j) | ವೇದನ್ |
| (k) | ಪರಿವಾರ ನಾಯಕ |
| (l) | ಮ್ಯಾಸ ನಾಯಕ |
| (m) | ಅರಸ್ ನಾಯಕ |
| (n) | ಬ್ಯಾಡ |
| (o) | ಹರನ್ ಶಿಕಾರಿ |
| (p) | ಚಿಗರಿ ಬೇಟಗಾರ್ |
| (q) | ವಾಲ್ಮಿ |
| (r) | ವಾಗರಿ |
| (s) | ನಿರ್ಶಿಕಾರಿ |
| (t) | ಬಾರ್ಗಿ |
| (u) | ಬೋವರಿ |
| (v) | ಫಸಾಚಾರಿ |
| (w) | ಹಿರ್ಶಿಕಾರಿ |
| 89 | ಡವೇರಿ |
| 90 (a) | ಗಾರುಡಿ |
| (b) | ಗಾರುಡಿಗ |
| (c) | ಗಾರಡಿಗ |
| 91 | ಪರಧೀಸ್ |

| ಕ್ರಮ ಸಂಖ್ಯೆ | ಜಾತಿಯ ಹೆಸರು | ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|---|---|
| 92 (a) | ಗಿರಣಿವಡ್ಡರ್ | 94 (a) | ಪಿಂಜಾರ |
| (b) | ತುಡುಗ್ ವೊಡ್ಡರ್ | (b) | ಪಿಂಜಾರಿ |
| (c) | ಕಲ್ಲು ವಡ್ಡರ್ | (c) | ನದಾಫ್ |
| (d) | ಮಣ್ಣು ವೊಡ್ಡರ್ | (d) | ಲದಾಫ್ |
| (e) | ಭಾಂದಿ ವೊಡ್ಡರ್ | (e) | ದೂದೇಕುಲ |
| 93 (a) | ಭೋಯಿ | (f) | ಮನ್ಸೂರಿ |
| (b) | ಬೋಯಿ | (g) | ಮನ್‌ಸೂರಿ |
| (c) | ಹರಿಕಂತ್ರ | 95 | ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿರುವ ಪರಿಶಿಷ್ಟ ಜಾತಿ |
| (d) | ಖಾರಿಯ | | |
| (e) | ಬೋವಿ | | |

ಪ್ರವರ್ಗ - II(ಎ)

| ಕ್ರಮ ಸಂಖ್ಯೆ | ಜಾತಿಯ ಹೆಸರು | ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|---|---|
| 1 (a) | ಅಗಸ | 3 (a) | ದೇವಾಡಿಗ |
| (b) | ಚಕಲ | (b) | ದೇವಲಿ |
| (c) | ಧೋಬಿ | (c) | ಮೊಯಿಲಿ |
| (d) | ಮಡಿವಾಳ | (d) | ಪಡಿಯಾರ್ |
| (e) | ಮನ್ನನ್ | (e) | ಸೇರೆಗಾರ |
| (f) | ಪರಿತ್ | (f) | ಸರ್ವೇಗಾರ |
| (g) | ರಾಜಕ | (g) | ಶೇರಗಾರ |
| (h) | ಸಕಲ | (h) | ಸಪಲಿಗ |
| (i) | ವನ್ನನ್ | 4 (a) | ಈಡಿಗ |
| (j) | ವೆಲ್ಲುತೇಡನ್ | (b) | ಬಂಧಾರಿ |
| (k) | ಸಾಕಲವಾಡು | (c) | ಬೆಲ್ಚಡ್ |
| 2 | ಬಣ್ಣ (ಕೊಡಗು ಜಿಲ್ಲೆ) | (d) | ಬಿಲ್ಲವ |

| | ಕ್ರ.ಸಂ. | ಜಾತಿಯ ಹೆಸರು | | ಕ್ರ.ಸಂ. | ಜಾತಿಯ ಹೆಸರು |
|---|---|---|---|---|---|
| | (e) | ಪೂಜಾರಿ | | (i) | ಕುಂಬಾರ್ಡ್ |
| | (f) | ದೀವರ | | (j) | ಕುಮ್ಹಾರ |
| | (g) | ಹಾಲ ಕ್ಷತ್ರಿಯ | | (k) | ಕುಸವನ್ |
| | (h) | ದೇಶ ಭಂಡಾರಿ | | (l) | ಮೂಲ್ಯ |
| | (i) | ದೇವರ | | (m) | ಸಜ್ಜನ ಕುಂಬಾರ |
| | (j) | ದೇವರ ಮಕ್ಕಳು : ದೀವರ ಮಕ್ಕಳು | | (n) | ಖುಮಾರ |
| | (k) | ಈಡಿಗ | | (o) | ಕುಂಭಾರ |
| | (l) | ಎಳಿಗ | | (p) | ಖುಂಭಾರ |
| | (m) | ಎಳವ | | (q) | ಕುಲಾಲರ್ |
| | (n) | ಗಾಮಲ್ಲ | 7 | (a) | ಕುರುಬ |
| | (o) | ಗೌಂಡ್ಲ | | (b) | ಭಾರವಾಡ್ |
| | (p) | ಹಳೇ ಪೈಕರು | | (c) | ಧನಗರ್ |
| | (q) | ಹಳೇ ಪೈಕ್ | | (d) | ಗೊರಯ |
| | (r) | ಇಲ್ಲಾವನ್ | | (e) | ಹಾಲು ಮತ |
| | (s) | ಕಲಾಲ್ | | (f) | ಕುರಬ್ |
| | (t) | ಮಲಯಾಳಿ ಬಿಲ್ಲವ | | (g) | ಕುರುಬನ್ |
| | (u) | ನಾಡರ್ | | (h) | ಕುರುಂಬ |
| | (v) | ನಾಮಧಾರಿ | | (i) | ಕುರುಬ್ |
| | (w) | ಥಿಯಾನ್ : ಥಿಯ್ಯ | | (j) | ಕುರುಂಬನ್ |
| | (x) | ಇಳಿಗ | 8 | (a) | ನಾಯಿಂದ |
| | (y) | ಗೂಂಡ್ಲ | | (b) | ಪರಿಯಾಳ (ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ) |
| | (z) | ತಿಯನ್ : ಥಿಯ್ಯಾನ್ | | (c) | ಅಂಬಟ್ಟನ್ |
| 5 | | ಕೊಡಗು ಹೆಗ್ಗಡೆ (ಕೊಡಗು ಜಿಲ್ಲೆ) | | (d) | ಬಜಂತ್ರಿ |
| 6 | (a) | ಕುಂಬಾರ | | (e) | ಬಂಡಾರಿ |
| | (b) | ಚಕ್ರಸಾಲಿ | | (f) | ಚೌರಿಯ |
| | (c) | ಗುಣಗ | | (g) | ಹಡಪದ |
| | (d) | ಗಣಗಿ | | (h) | ಹಜಾಮ |
| | (e) | ಕೊಯವ | | (i) | ಕವುಟಿಯನ್ |
| | (f) | ಕುಲ | | (j) | ಕೆಲಸಿ |
| | (g) | ಕುಲಾಲ | | (k) | ಕ್ಷೌರಿಕ |
| | (h) | ಕುಂಬಾರ್ | | (l) | ಕ್ಷೌರದ್ |

| | ಕ್ರ.ಸಂ. | ಜಾತಿಯ ಹೆಸರು | | ಕ್ರ.ಸಂ. | ಜಾತಿಯ ಹೆಸರು |
|---|---|---|---|---|---|
| | (m) | ಮಹಾಲೆ | | (e) | ಬಡಿಗರ್ |
| | (n) | ಮಂಗಳ | | (f) | ಬಡಿವಾಡ್ಲ |
| | (o) | ಮೇಲಗಾರ | | (g) | ಬೈಲ್‌ಪತರ್ |
| | (p) | ನಾಡಿಗ | | (h) | ಬೈಲು ಅಕ್ಕಸಾಲಿ |
| | (q) | ನಾಪಿತ | | (i) | ಬೈಲು ಕಮ್ಮಾರ |
| | (r) | ನೆವಲಿಗ್ | | (j) | ಬೋಗಾರ |
| | (s) | ನಾವಿ | | (k) | ಚಪ್ಪೇಗಾರ್ |
| | (t) | ನಯನಜ ಕ್ಷತ್ರಿಯ | | (l) | ಚಾರೋಡಿ |
| | (u) | ನ್ಹಾವಿ | | (m) | ಕೊಂಕಣಿ ಆಚಾರ್ |
| | (v) | ವಾಜಂತ್ರಿ (ಉತ್ತರ ಕನ್ನಡ ಜಿಲ್ಲೆ) | | (n) | ದೈವಜ್ಞ ಬ್ರಾಹ್ಮಣ |
| | (w) | ಸವಿತ | | (o) | ಗೆಜ್ಜೆಗಾರ |
| | (x) | ನಯನಜ ಕ್ಷತ್ರಿ | | (p) | ಕಂಬಾರ್ |
| | (y) | ನಾಡಿಗ್ | | (q) | ಕಮ್ಮಾಲನ್ |
| | (z) | ಕ್ಷೌರಿಕ್ | | (r) | ಕಮ್ಮಾರ |
| | (aa) | ಕ್ಷೌರಿಕ | | (s) | ಕಂಸಾಳ |
| 9 | | ಬೌದ್ಧರು | | (t) | ಕಂಸನ್ |
| 10 | (a) | ತಿಗಲ | | (u) | ಕಂಚಗಾರ್ |
| | (b) | ಅಗ್ನಿವಂಶ | | (v) | ಕಂಚೋರ |
| | (c) | ಅಗ್ನಿವನ್ನ | | (w) | ಕಂಚೋರಿ |
| | (d) | ಅಗ್ನಿಕುಲಕ್ಷತ್ರಿಯ | | (x) | ಕಂಚುಗಾರ |
| | (e) | ಧರ್ಮರಾಜ ಕಾಪು | | (y) | ಕಂಸಾರ್ |
| | (f) | ಪಳ್ಳಿ | | (z) | ಕಸಾರ್ |
| | (g) | ಶಂಭುಕುಲ ಕ್ಷತ್ರಿಯ | | (aa) | ಲುಹಾರ್ |
| | (h) | ತಿಗಳ | | (ab) | ಮಿಸ್ತ್ರಿ |
| | (i) | ವನ್ನಿಯರ್ | | (ac) | ಪಂಚಾಲ್ |
| | (j) | ವನ್ನಿಕುಲಕ್ಷತ್ರಿಯ | | (ad) | ಪತ್ತರ್ |
| | (k) | ತಿಗ್ಲರ್ | | (ae) | ಶಿಲ್ಪಿ |
| | (l) | ಕುರೋವನ್ | | (af) | ಸೋಹಗಾರ್ |
| 11 | (a) | ವಿಶ್ವಕರ್ಮ | | (ag) | ಸೋನಾರ್ |
| | (b) | ಆಚಾರಿ | | (ah) | ಸೋನಿ |
| | (c) | ಅಕ್ಕಸಾಲಿ | | (ai) | ಸುತಾರ್ |
| | (d) | ಔಸಾಲ | | (aj) | ತಸೆಹಾನ್ |

| | ಕ್ರ.ಸಂ. | ಜಾತಿಯ ಹೆಸರು |
|---|---|---|
| | (ak) | ವಿಶ್ವ ಬ್ರಾಹ್ಮಣ |
| | (al) | ಥಟ್ಟನ್ |
| | (am) | ಅಕ್ಕಾಲಿ |
| | (an) | ಕಂಸಾಲ್ |
| | (ao) | ಬಡಗಿ |
| 12 | (a) | ಅಘೋರಿ |
| | (b) | ಕರ್‌ಕರ್ ಮುಂಡಾ |
| 13 | | ಅಜ್ಞಾನಿ |
| 14 | | ಅಂಭಲವಾಸಿ |
| 15 | | ಅಂಡೂರನ್ |
| 16 | (a) | ಅಟರಿ |
| | (b) | ಅಥರಿ |
| 17 | | ಬಹುರೂಪಿ |
| 18 | | ಬಕಥ್ರ |
| 19 | (a) | ಬತಾಲ್ |
| | (b) | ಬಟ್ವಾಲ್ |
| | (c) | ಬಟ್ವರ್ |
| 20 | | ಬವ್ವಾರ್ |
| 21 | (a) | ಭಾಟ್ |
| | (b) | ಬೊಹ್ರೋಟ್ |
| 22 | | ಬಿನ್ನಪಟ್ಟಿ |
| 23 | | ಬಿಂಗಿ |
| 24 | (a) | ಬಗಡಿ |
| | (b) | ಬಗಾಡಿ |
| | (c) | ಬಗ್ಡಿ |
| 25 | (a) | ಚಲಿಯನ್ |
| | (b) | ತೆರುವನ್ |
| | (c) | ಚಲ್ಲಿಯ |
| 26 | | ಚಂಬೋಟಿ |
| 27 | | ಚಂಬುಕುಟ್ಟಿ |
| 28 | | ಮೆಸ್ತಾ |
| 29 | | ಚಿಂಗಾರ್ |

| | ಕ್ರ.ಸಂ. | ಜಾತಿಯ ಹೆಸರು |
|---|---|---|
| 30 | (a) | ಘಾಡಿ |
| | (b) | ಗಾಡಿಗ |
| | (c) | ಗುನಗಿ |
| 31 | (a) | ಘಾಡ್ಸಿ |
| | (b) | ಘಾಡ್‌ಶಿ |
| 32 | | ಓಂಗೈ |
| 33 | (a) | ಗೋಸಾವಿ |
| | (b) | ಗೋಸಾಯನ್ |
| 34 | (a) | ಗುಜಾರ್ |
| | (b) | ಗುಜ್ಜಾರ್ |
| 35 | (a) | ಗುರವ |
| | (b) | ಗುರೋವ್ |
| 36 | (a) | ಗಬ್ಬಿಟ್ |
| | (b) | ಗಪಿಟ್ |
| | (c) | ಗಾಬಿಟ್ |
| | (d) | ದಾಲಿಜ |
| 37 | | ಹಂಡೇವಜೀರ್ |
| 38 | | ಹಂಡೇರ್ವತ್ |
| 39 | | ಹೊನ್ನಿಯರ್ |
| 40 | (a) | ಹೂವಾಡಿಗ |
| | (b) | ಹುಗಾರ್ |
| | (c) | ಹೂಗಾರ್ |
| | (d) | ಮಾಲಗಾರ್ |
| | (e) | ಮಾಲಿ |
| | (f) | ಫೂಲ್‌ಮಾಲಿ |
| | (g) | ಫುಲ್‌ಮಾಲಿ |
| | (h) | ಫುಲಾರಿ |
| | (i) | ಪೂಲಾರಿ |
| | (j) | ಜೀರ್ |
| 41 | | ಕಾಡು ಕೊಂಕಣಿ |
| 42 | | ಕರಿಕುಡುಂಬಿ |
| 43 | | ಕರುವ |

| | ಕ್ರ.ಸಂ. | ಜಾತಿಯ ಹೆಸರು |
|---|---|---|
| 44 | (a) | ಖಾಟಿಕ್ |
| | (b) | ಕಟುಕ |
| | (c) | ಕಟುಗ |
| 45 | | ಬೋಗಾರ್ |
| 46 | | ಕಸ್ಬಿನ್ |
| 47 | (a) | ಕೂಲಾಯಿರಿ |
| | (b) | ಕೂಲ್‌ಯಿರಿ |
| 48 | (a) | ಕಣಿಸನ್ |
| | (b) | ಬಲ್ಯಾಯ (ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ) |
| | (c) | ಕಣಿಯರ್ |
| | (d) | ಕಣಿಯರು |
| | (e) | ಕಣಿಯ |
| | (f) | ಕಣಿಯನ್ (ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು ಹೊರತು ಪಡಿಸಿ) |
| | (g) | ಕಣ್ಯಸ್ |
| 49 | | ಕುಟುಮ |
| 50 | | ಮರ್ತ |
| 51 | (a) | ಮರಯನ್ |
| | (b) | ಮರವನ್ |
| 52 | | ಮುರಾರಿ |
| 53 | (a) | ನಾಡೋರ |
| | (b) | ಉಪ್ಪು ನಾಡರ್ : ಉಪ ನಾಡೂರ |
| | (c) | ತೊರ್ಕೆ ನಾಡೋರ್ |
| | (d) | ನಾಡೋರ್ |
| | (e) | ನಾಡವರ್ |
| | (f) | ನಾಡವ |
| | (g) | ಉಪ್ಪು ನಾಡೋರ : ಉಪ ನಾಡವರ್ |
| 54 | | ನಾಲ್ಕಿ |
| 55 | | ಒಸ್ತನ್ |
| 56 | (a) | ಪಂಡರಂ |
| | (b) | ಪಂಡಾರ್ |
| | (c) | ಪಂಡಾರ |
| 57 | | ಪನಬ |
| 58 | | ಪನ್ನೇಕರ ಕೊಂಕಣಿ |
| 59 | | ಪತ್ರ |
| 60 | | ಪಿಚಾಟಿ |
| 61 | | ಪುಲ್ಲವನ್ |
| 62 | (a) | ರಾಜಪುರಿ |
| | (b) | ರಾಜಪುರ್ |
| | (c) | ಬಾಲವಾಲಿಕರ್ |
| 63 | | ಸನಿಯಾರ್ |
| 64 | | ಶಾನನ್ |
| 65 | (a) | ಸುದಿರ್ |
| | (b) | ಸೂದ್ರ |
| | (c) | ಕುಳವಾಡಿ ಮರಾಟೆ |
| 66 | | ಸುಟ್ಸಾಲಿ |
| 67 | | ತಚಾಯಿರಿ |
| 68 | | ತಿಲ್ಲಿ |
| 69 | (a) | ಗವಂಡಿ |
| | (b) | ಗೋವಂಡಿ |
| 70 | | ವೆಟ್ಟುವನ್ |
| 71 | (a) | ಎಕ್ಲರ್ |
| | (b) | ಯಕ್ಲರ್ |
| | (c) | ಈಗಳಿಕ |
| 72 | (a) | ಗಟ್ಟಿ : ಗಟ್ಟಿಯವರು |
| | (b) | ಪೊಲೆದವ : ಪೋಲದವರು |
| 73 | | ಗುಡಿಗಾರ |
| 74 | (a) | ದರ್ಜಿ |
| | (b) | ಭಾವಸಾರ ಕ್ಷತ್ರಿಯ |
| | (c) | ಚಿಪ್ಪಿ |
| | (d) | ಚಿಪ್ಪಿಗ |
| | (e) | ಸಿಂಪಿ |
| | (f) | ಶಿಂಪಿ |

| | ಕ್ರ.ಸಂ. | ಜಾತಿಯ ಹೆಸರು |
|---|---|---|
| | (g) | ಸಾಯಿ |
| | (h) | ಮಿರಾಲ್ |
| | (i) | ರಂಗಾರಿ |
| | (j) | ರಂಗ್ರೇಜ್ |
| | (k) | ನಿಲಾರಿ |
| | (l) | ನಾಮದೇವ |
| | (m) | ನಾಮದೇವ ಸಿಂಪಿ |
| | (n) | ರಂಗಾರೆ |
| | (o) | ನೀಲಗಾರ್ |
| 75 | (a) | ದೇವಾಂಗ |
| | (b) | ದೇವಾಂಗ್ |
| | (c) | ಕೋಷ್ಠಿ |
| | (d) | ಹಟಗಾರ್ : ಹಟಕಾರ್ |
| | (e) | ಜೇಡ್ |
| | (f) | ವಿಂಕಾರ್ |
| | (g) | ಜುಲೋಹಿ |
| | (h) | ಹಲ್ಕಾರ್ |
| | (i) | ಹಟಗಾಲ್ |
| 76 | (a) | ನೇಯ್ಗಿ |
| | (b) | ಕುರುಹಿನ ಶೆಟ್ಟಿ |
| | (c) | ಕುರ್ನಿ |
| | (d) | ಬಳಿಮಗ್ಗ |
| | (e) | ತೊಗಟ : ತೊಗಟರು : ತೊಗಟಿಗ : ತೊಗಟವೀರ : ತೊಗಟಿಗೇರ : ತೊಗಟವೀರ ಕ್ಷತ್ರಿಯ : ತೊಗಜ್ಞ ಪುಷ್ಪಾಂಜಲಿ |
| | (f) | ಸೋಣಿಗ |
| | (g) | ಜಂಕಾನ |
| | (h) | ಐರಿ |
| | (i) | ಅವಿರ್ |
| | (j) | ಸಾಲೆ : ಪಟ್ಟಸಾಲೆ |
| | (k) | ಪದ್ಮಸಾಲೆ : ಪದ್ಮಶಾಲಿ : ಪದ್ಮಸಾಲಿ |
| | (l) | ಸಾಲಿ : ಪಟ್ಟಸಾಲಿ |
| | (m) | ಕೈಕೋಳನ್ : ಸೆಂಗುಂದರ್ |
| | (n) | ನೇಯ್ಕಾರ್ |
| | (o) | ಜಾಡರ್ |
| | (p) | ಜಾಂಡ್ರ |
| | (q) | ಸ್ವಕುಳಸಾಳಿ : ಸ್ವಕುಳಸಾಳೆ |
| 77 | (a) | ಪಟೇಗಾರ್ |
| | (b) | ಪಟ್ವೇಕಾರಿ |
| | (c) | ಪಟ್ವೇಗಾರ್ |
| | (d) | ಸೋಮವಂಶ ಸಹಾಸ್ರಾರ್ಜುನ ಕ್ಷತ್ರಿಯ |
| 78 | (a) | ಗಾಣಿಗ |
| | (b) | ತೇಲಿ |
| | (c) | ಗಾಂಡ್ಲ |
| | (d) | ವನಿಯನ್ |
| | (e) | ಜ್ಯೋತಿನಗರ : ಜ್ಯೋತಿನಗರ ವೈಶ್ಯ |
| 79 | | ಅಮ್ಮ ಕೊಡವ |
| 80 | | ಅನಪ್ಪನ್ |
| 81 | | ರಜಪೂತ್ |
| 82 | (a) | ಆಂಡಿ |
| | (b) | ಆಂಡಿಪಂಡಾರಂ |
| 83 | | ಬಾಂಧಿ |
| 84 | (a) | ಬೋಲಹಳ್ಳಾಲ |
| | (b) | ಬಲ್ಲಾಳ |
| 85 | (a) | ಭಟಿಯಾಲ್ |
| | (b) | ಭಟ್ಟಿಯಾ |
| 86 | | ಚಕ್ಕನ್ |
| 87 | | ಡೋಗ್ರ |
| 88 | | ಗುಳ್ಳಿ |
| 89 | | ಹಿಂದೂ ಸಾದರು : ಸಾದರು : ಸಾದುಮತ : ಸಾದಕುಲ : ಸಾದರ್ : ಸಾದುಗೌಡ : ಸಾದುಗೌಡರ್ : ಸಾದರ : ಸಾದರಿ : ಸಾದರಗೌಡ |

| | ಕ್ರ.ಸಂ. | ಜಾತಿಯ ಹೆಸರು | | ಕ್ರ.ಸಂ. | ಜಾತಿಯ ಹೆಸರು |
|---|---|---|---|---|---|
| 90 | (a) | ಜೆಟ್ಟಿ : ಜಟ್ಟಿ | | (i) | ರಾಮರಾಜ ಕ್ಷತ್ರಿಯ |
| | (b) | ಮಲ್ಲಾರು ಮಲ್ಲ ಕ್ಷತ್ರಿಯ | | (j) | ಸೇರುಗಾರ (ಉತ್ತರ ಕನ್ನಡ) |
| | (c) | ಮುಷ್ಟಿಗೆ | | (k) | ಸರ್ವ್‌ಗಾರ್ (ದಕ್ಷಿಣ ಕನ್ನಡ) |
| 91 | (a) | ಕಲಾವಂತಿ | | (l) | ಕೋಟೆ ಕ್ಷತ್ರಿಯ |
| | (b) | ಭೋಗಂ : ತೆಲುಗ | 94 | | ಕ್ಷತ್ರಿಯ : ಕ್ಷತ್ರಿ |
| 92 | (a) | ಕನಕನ್ | 95 | | ಮಲವ |
| | (b) | ಕನಕರ್ | 96 | | ಮಲೆಯ |
| | (c) | ಕರುಣಿಕ | 97 | | ಆರ್‍ಕನ್ |
| 93 | (a) | ಕೋಟೆಗಾರ | 98 | (a) | ರಾಜು ಕ್ಷತ್ರಿಯ |
| | (b) | ಕೋಟೆಯಾರ | | (b) | ರಾಜು - ರಾಜು |
| | (c) | ಕೊಥಾಟಿ | | (c) | ರಾಜುವರ್ : ರಾಜವರ್ : ರಾಜೀವಾರ್ |
| | (d) | ಕೊಟ್ಟೇಗಾರ | 99 | | ಸೋಮವಂಶ ಕ್ಷತ್ರಿಯ |
| | (e) | ಕೊಟ್ಟೇಯಾರ | 100 | | ಸ್ವಾನಿಕ |
| | (f) | ಕುಮಾರ ಕ್ಷತ್ರಿಯ | 101 | (a) | ತುಳು |
| | (g) | ಕುಮಾರ ಪಂಥ್ : ಕೊಮಾರ್ ಪಂತ್ : ಕೋಮಾರ್ ಪೈಕ್ : ಕ್ಷತ್ರಿಯ ಕೋಮಾರ್ ಪಂತ | | (b) | ತುಳುವ |
| | (h) | ರಾಮ ಕ್ಷತ್ರಿಯ | 102 | | ಉಪ್ಪಮ (ಧಾರವಾಡ, ಬೆಳಗಾಂ, ಬಿಜಾಪುರ ಮತ್ತು ಗದಗ್ ಜಿಲ್ಲೆಗಳು) |

## ಪ್ರವರ್ಗ - II (ಬಿ)

| ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|
| 1 | ಮುಸ್ಲಿಂ |

## ಪ್ರವರ್ಗ - III (ಎ)

| | ಕ್ರ.ಸಂ. | ಜಾತಿಯ ಹೆಸರು | | ಕ್ರ.ಸಂ. | ಜಾತಿಯ ಹೆಸರು |
|---|---|---|---|---|---|
| 1 | (a) | ಒಕ್ಕಲಿಗ | | (h) | ರೆಡ್ಡಿ ಒಕ್ಕಲಿಗ |
| | (b) | ವಕ್ಕಲಿಗ | | (i) | ಮರಸು ಒಕ್ಕಲಿಗ |
| | (c) | ಸರ್ಪ ಒಕ್ಕಲಿಗ | | (j) | ಗೌಡ (GOUDA) / ಗೌಡ (GOWDA) |
| | (d) | ಹಳ್ಳಿಕಾರ್ ಒಕ್ಕಲಿಗ | | (k) | ಹಳ್ಳಿಕಾರ್ |
| | (e) | ನಾಮಧಾರಿ ಒಕ್ಕಲಿಗ | | (l) | ಕುಂಚಿಟಿಗ |
| | (f) | ಗಂಗಡ್‌ಕಾರ್ ಒಕ್ಕಲಿಗ | | (m) | ಗೌಡ |
| | (g) | ದಾಸ್ ಒಕ್ಕಲಿಗ | | (n) | ಕಾಪು |

| | ಕ್ರ.ಸಂ. | ಜಾತಿಯ ಹೆಸರು | | ಕ್ರ.ಸಂ. | ಜಾತಿಯ ಹೆಸರು |
|---|---|---|---|---|---|
| | (o) | ಹೆಗ್ಗಡೆ | | (d) | ತೆಲಗ ಬಲಿಜ / ತೆಲಗ ಬಣಜಿಗ |
| | (p) | ಕಮ್ಮ | | (e) | ಶೆಟ್ಟಿಬಲಿಜ / ಶೆಟ್ಟಿಬಣಜಿಗ / ಬಣಜಿಗ ಶೆಟ್ಟಿ |
| | (q) | ರಡ್ಡಿ | | (f) | ದಾಸರ ಬಲಿಜ / ದಾಸರ ಬಲಜಿಗ / ದಾಸರ ಬಣಜಿಗ / ದಾಸ ಬಣಜಿಗ |
| | (r) | ಗೌಂಡರ್ | | (g) | ಕಸ್ಬನ್ |
| | (s) | ನಾಮಧಾರಿ ಗೌಡ | | (h) | ಮುನ್ನೂರ / ಮುನ್ನಾರ್ / ಮುನ್ನೂರ್ ಕಾಪು |
| | (t) | ಉಪ್ಪಿನ ಕೊಳಗ / ಉತ್ತಮ ಕೊಳಗ | | (i) | ಬಳೆಗಾರ / ಬಳೆ ಬಣಜಿಗ / ಬಳೆ ಬಲಜಿಗ/ ಬಳೆ ಚೆಟ್ಟಿ / ಬಣಗಾರ |
| 2 | | ಕೊಡಗರು | | (j) | ರೆಡ್ಡಿ (ಬಲಿಜ) |
| 3 | (a) | ಬಲಿಜ | | (k) | ಜನಪ್ಪನ್ |
| | (b) | ಬಲಜಿಗ / ಬಣಜಿಗ / ಗೌಡಬಣಜಿಗ | | (l) | ಉಪ್ಪಾರ (ಬಲಿಜ) |
| | (c) | ನಾಯ್ಡು | | (m) | ತುಲೇರು (ಬಲಿಜ) |

## ಪ್ರವರ್ಗ - III (ಬಿ)

| | ಕ್ರ.ಸಂ. | ಜಾತಿಯ ಹೆಸರು | | ಕ್ರ.ಸಂ. | ಜಾತಿಯ ಹೆಸರು |
|---|---|---|---|---|---|
| 1 | (a) | ವೀರಶೈವ ಲಿಂಗಾಯತ | | | |
| | (b) | ಲಿಂಗಾಯತ ಉಪ ಜಾತಿಗಳಾದ ಹಳವ, ಅಂಬಿಗ, ಭೋಯಿ, ಗಂಗಮತ, ಸುಣಗಾರ, ಅಗಸ, ಮಡಿವಾಳ ಕುಂಬಾರ, ಕುರುಬ, ಬಜಂತ್ರಿ, ಬಂಡಾರಿ, ಹಡಪದ, ಕ್ಷೌರಿಕ, ನವಲಿಗ ನಾವಿ, ಅಕ್ಕಸಾಲಿ, ಬಡಿಗಾರ್, ಕಮ್ಮಾರ, ಕಂಸಾಳ, ಪಂಚಾಳ, ಮೇದರ ಉಪ್ಪಾರ, ಗೌಳಿ | | (b) | ಪರಿವಾರ ಬಂಟ್ |
| | | | 5 | | ಜೈನರು (ದಿಗಂಬರರು) |
| 2 | (a) | ಮರಾತ, ಮರಾಠ | 6 | (a) | ಸಾತಾನಿ |
| | (b) | ಆರೆ ಕ್ಷತ್ರಿ, ಅರೆ ಮರಾಠ, ಆರ್ಯಮರಾಠ | | (b) | ಚಾತ್ತದ ಶ್ರೀವೈಷ್ಣವ / ಚಾತ್ತಾದ ವೈಷ್ಣವ / ಶಾತ್ತಾದ ವೈಷ್ಣವ / ಶಾತ್ತಾದ ಶ್ರೀವೈಷ್ಣವ |
| | (c) | ಆರ್ಯ, ಆರ್ಯರು | | (c) | ಕದ್ರಿ ವೈಷ್ಣವ |
| | (d) | ಕೊಂಕಣ ಮರಾಠ | | (d) | ಸಮೇರಾಯ |
| | (e) | ಕ್ಷತ್ರಿಯ ಮರಾಠ | | (e) | ಸಾತ್ತದವಲ್ |
| | (f) | ಕುಳವಾಡಿ | | (f) | ಸಾತ್ತದವನ್ |
| 3 | | ಕ್ರಿಶ್ಚಿಯನ್ | | (g) | ವೈಷ್ಣವ |
| 4 | (a) | ಬಂಟ್ / ಬಂಟ್ | | | |

ಡಿ.ಎಂ. ಆಶಾ
ಸರ್ಕಾರದ ಉಪ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ

## ಸರ್ಕಾರಿ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ: 30-03-2002

### ಅನುಬಂಧ - II

### ಹೊಸ ಸಮಗ್ರ ಕೆನೆ ಪದರ

ಸಂವಿಧಾನದ ಪರಿಚ್ಛೇದ 15 (4) ಹಾಗೂ 16 (4)ರ ಅಡಿಯಲ್ಲಿ ಪ್ರವರ್ಗ II A, II B, III A, III B ಇವುಗಳಲ್ಲಿ ಕೆನೆಪದರಕ್ಕೆ ಸಂಬಂಧಿಸಿದಂತೆ ಹಾಲಿ ನೀಡಲಾಗಿರುವ ಮೀಸಲಾತಿಯ ಪ್ರಕಾರ ಈ ಕೆಳಕಂಡ ವ್ಯಕ್ತಿಗಳು ಮೀಸಲಾತಿ ಸ್ಥಾನಗಳಿಗೆ ಅಥವಾ ಹುದ್ದೆಗಳಿಗೆ ಅರ್ಹರಾಗಿರುವುದಿಲ್ಲ.

**ಟಿಪ್ಪಣಿ**

(1) ನೇರ ನೇಮಕಾತಿಗಳಲ್ಲಿ ಯಾವುದಾದರೂ ಹುದ್ದೆಗಳಿಗೆ ಅರ್ಹತೆಯಾಗಿ, ಕೆಳಗಿನ ಹುದ್ದೆಗಳಲ್ಲಿ ಇನ್ನಾವುದೇ ಹುದ್ದೆಗಳಲ್ಲಿ, ವೃತ್ತಿಯಲ್ಲಿ ಅಥವಾ ಉದ್ಯೋಗದಲ್ಲಿ ನಿರ್ದಿಷ್ಟ ಅವಧಿಯ ಅನುಭವವನ್ನು ನಿಯಮಿಸಿದ ಸಂದರ್ಭಗಳಲ್ಲಿ ಅಂತಹ ಹುದ್ದೆಗಳನ್ನು ತುಂಬುವಾಗ ಕೆನೆಪದರ ನಿಯಮವನ್ನು ಅನ್ವಯಿಸಬಾರದು.

(2) ಈ ನಿಯಮ ಕೆಳಗಿನ ಪಟ್ಟಿಯಲ್ಲಿ ನಮೂದಿಸಿರುವ ವ್ಯಕ್ತಿಗಳ ಮಕ್ಕಳಿಗೆ ಅನ್ವಯಿಸುತ್ತದೆ.

| | |
|---|---|
| 1 | (a) ಭಾರತದ ರಾಷ್ಟ್ರಪತಿಗಳು<br>(b) ಭಾರತದ ಉಪ ರಾಷ್ಟ್ರಪತಿ<br>(c) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಂಪುಟ ದರ್ಜೆಯ ಹುದ್ದೆಯನ್ನು ಹೊಂದಿರುವ ಎಲ್ಲರೂ<br>(d) ರಾಜ್ಯಸಭೆ ಹಾಗೂ ರಾಜ್ಯಗಳ ವಿಧಾನ ಪರಿಷತ್ತಿನ ಅಧ್ಯಕ್ಷರು<br>(e) ರಾಜ್ಯಪಾಲರುಗಳು<br>(f) ಲೋಕಸಭೆ ಹಾಗೂ ವಿಧಾನ ಸಭೆಗಳ ಸಭಾಪತಿಗಳು<br>(g) ಸರ್ವೋಚ್ಚ ಹಾಗೂ ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳು<br>(h) ಲೋಕಸೇವಾ ಆಯೋಗದ ಅಧ್ಯಕ್ಷರು<br>(i) ಭಾರತದ ಮಹಾ ನ್ಯಾಯವಾದಿ (Attorney General of India)<br>(j) ಅಡ್ವೋಕೇಟ್ ಜನರಲ್<br>(k) ಮುಖ್ಯ ಚುನಾವಣಾ ಆಯುಕ್ತರು<br>(l) ನಿಯಂತ್ರಕ ಹಾಗೂ ಮಹಾ ಲೆಕ್ಕಪರಿಶೋಧಕ, ಭಾರತ ಸರ್ಕಾರ (Comptroller and Auditor general of India)<br>(m) ಕನಿಷ್ಠ 5 ವರ್ಷಗಳ ಅವಧಿಗೆ ಸಂಸತ್ತು ಸದಸ್ಯರಾಗಿರುವವರು – ಅವರ ಅಧಿಕಾರಾವಧಿಯಲ್ಲಿ<br>(n) ಕನಿಷ್ಠ 5 ವರ್ಷಗಳ ಅವಧಿಗೆ ರಾಜ್ಯಗಳ ಶಾಸನ ಸಭೆಯ ಸದಸ್ಯರಾಗಿರುವವರು - ಅವರ ಅಧಿಕಾರಾವಧಿಯಲ್ಲಿ |
| 2 | ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ / ಪೋಷಕರು, ಸರ್ಕಾರದ ಒಂದನೇ ಅಥವಾ ಎರಡನೇ ದರ್ಜೆಯ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದರೆ ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ತತ್ಸಮಾನವಾದ ಹುದ್ದೆಗಳನ್ನು ಹೊಂದಿದ್ದರೆ ಅಥವಾ ಖಾಸಗಿ ಕೈಗಾರಿಕೆ : ಸಂಸ್ಥೆಗಳ ಉದ್ಯೋಗಿಯಾಗಿದ್ದು, ಎರಡನೆಯ ದರ್ಜೆ ಅಧಿಕಾರಿಯು ಪಡೆಯುತ್ತಿರುವ ವೇತನ ಶ್ರೇಣಿಗಿಂತ ಕಡಿಮೆಯಿಲ್ಲದ ವೇತನ ಶ್ರೇಣಿಯ ವೇತನ ಪಡೆಯುತ್ತಿದ್ದರೆ (ವೇತನ ಶ್ರೇಣಿ ರೂ.6000-11200) |
| 3 | ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ / ಪೋಷಕರ ವಾರ್ಷಿಕ ಒಟ್ಟು ಆದಾಯ (Gross Income) ರೂ.2.00 ಲಕ್ಷ ಮೀರಿದ್ದರೆ |
| 4 | ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ / ಪೋಷಕರ ಸೇರಿದಂತೆ ಕರ್ನಾಟಕ ಭೂ ಸುಧಾರಣಾ ಕಾಯಿದೆ 1961 ರಡಿಯಲ್ಲಿ ನಿಗದಿಪಡಿಸಿರುವ 10 ಯೂನಿಟ್ ಕೃಷಿ ಭೂಮಿಗಿಂತ ಹೆಚ್ಚು ಕೃಷಿ ಭೂಮಿ ಹೊಂದಿರುವವರು ಆದರೆ, ಪ್ಲಾಂಟೇಶನ್ ಬೆಳೆಗಳನ್ನು ಬೆಳೆಯುವ ಭೂಮಿಗೆ ಸಂಬಂಧಿಸಿದಂತೆ 20 ಎಕರೆಗಿಂತ ಹೆಚ್ಚು ಭೂಮಿ ಹೊಂದಿರುವವರು. |

ಡಿ.ಎಂ. ಆಗಾ
ಸರ್ಕಾರದ ಉಪ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ